ಅವನಿಗೆ ಸಪೋರ್ಟ್ ಮಾಡಿ ಕಾರವಾರಕ್ಕೆ ಕಳಿಸಿದ್ದಳು. ಆದರೆ ಕಾರವಾರದಲ್ಲಿ ಹೆಚ್ಚಿನವು ಮೀನೂಟದ ಹೋಟೆಲ್ಲುಗಳು. ಇರುವ ಸಸ್ಯಾಹಾರಿ ಹೋಟೆಲ್ಲುಗಳಲ್ಲಿ ಜೋಳದ ರೊಟ್ಟಿಗಿಟ್ಟಿ ಸಿಗುತ್ತಿರಲಿಲ್ಲ. ಅವನು ಒಂದಿಷ್ಟು ಅಡುಗೆ ಕಲಿತಿದ್ದನಾದರೂ ಒಬ್ಬನೇ ಮಾಡಿಕೊಳ್ಳುವುದಕ್ಕೆ ಮೂಡ್ ಬರುತ್ತಿರಲಿಲ್ಲ. ಅದಕ್ಕೇ ಸುಮಿಯನ್ನು ಜೊತೆಗೆ ಕರೆದೊಯ್ಯೋಕೆ ಬಂದಿದ್ದ. ಅದು ನೆಪ ಅಷ್ಟೇ, ಅವನಿಗೆ ಒಬ್ಬನೇ ಮನೆಬಿಟ್ಟು ಉಳಿದು ರೂಢಿಯಿಲ್ಲ, ಅದಕ್ಕಿಂತ ಪ್ರೀತಿಯ ಸಹೋದರಿಯನ್ನು ಬಿಟ್ಟಿರಲಾರ ಎಂಬುದು ನೀಲವ್ವಳಿಗೆ ಗೊತ್ತಿತ್ತು. ಚಿಕ್ಕ ವಯಸ್ಸಿನಲ್ಲೇ ಅದ್ಭುತ ಅಡುಗೆ ಕಲಿತುಕೊಂಡಿದ್ದ ಸುಮಿಯನ್ನು ವಿರುಪಾಕ್ಷಿ ಕರೆದೊಯ್ಯಲಿ, ಎಂಬುದು ನೀಲವ್ವನ ಒಳಮನಸ್ಸಾಗಿತ್ತು. ಅದಕ್ಕೆ ಬೇರೆಯದೇ ಕಾರಣವೂ ಇತ್ತಲ್ಲ!

ಸುಮಿ ಪಿಯುಸಿ ಮೊದಲನೇ ವರ್ಷ ಪಾಸಾಗಿದ್ದಳು, ಅಷ್ಟೇ. ಆಗಲೇ 'ಹುಡುಗಿ ದೊಡ್ಡಾಗ್ಯಾಳ, ಲಗೂನ ಶಾದಿ ಮಾಡು' ಅಂತ ಸುಬ್ಬಜ್ಜಿ ದಿನಾ ಬೆಳಗ್ಗೆ ಲಿಂಗಣ್ಣನಿಗೆ ವರಾತ ಹಚ್ಚಲು ಶುರು ಮಾಡಿದ್ದಳು. ಕುಂತ್ರೆ ನಿಂತ್ರೆ ಮದುವೇದೆ ಮಾತು ಮುದುಕಿಗೆ. 'ಶಿವನಪಾದ ಸೇರುಮುಂದ ಮೊಮ್ಮಗಳ ಶಾದಿ ಕಣ್ತುಂಬಿಕೊಳ್ಳೋ ಹಂಗ ಮಾಡ್ತ್ಯೋ ಇಲ್ಲಾ?' ಎಂಬಂಥ ಭಾವನಾತ್ಮಕ ಮಾತುಗಳಿಂದ ಲಿಂಗಣ್ಣನವರನ್ನು ಕಟ್ಟಿ ಹಾಕುವಳು. ತಾಯಿ ಅಂದರೆ ಭಯಭಕ್ತಿ ತುಂಬಿದ್ದ ಲಿಂಗಣ್ಣ, 'ನಿನ್ನ ಮೊಮ್ಮಗಳಿಗೆ ಹದಿನೆಂಟು ತುಂಬಿದ ಕೂಡ್ಲೆ ಮಾಡೋಣ ತಗೋ' ಎಂದು ಭರವಸೆ ಕೊಡುತ್ತಿದ್ದರು. 'ಇನ್ ಏಟ್ ದಿನ ಐತಿ ಹದನೆಂಟಕ್ಕ? ವರ ನೋಡೋಕೆ ಶುರುಮಾಡು' ಎಂದು ಹಟ ಮಾಡುತ್ತಿದ್ದಳು. ಪತ್ರಿಯಂಥ ಮಗಳನ್ನು ಎಳೆಯ ವಯಸ್ಸಲ್ಲೇ ಮದುವಿ ಮಾಡಿ ಕಳಿಸುವುದು ನೀಲವ್ವನ ಮನಸ್ಸಿಗೆ ಬಿಲ್‌ಕುಲ್ ಇಷ್ಟವಿರಲಿಲ್ಲ. ಅದಕ್ಕೇ ಮಗಳು ಕಣ್ಣ ಹೊರಗಿದ್ದರೆ ಅಜ್ಜಿಯ ಕರಕರೆಯೂ ಇರಾಂಗಿಲ್ಲ, ಸುರಳೀತ ಓದೂ ಮುಂದುವರಿಯುತ್ತದೆ ಎಂಬುದೇ ನೀಲವ್ವನ ಲೆಕ್ಕಾಚಾರವಾಗಿತ್ತು. ವಿರುಪಾಕ್ಷಿಗೂ ಪ್ರೀತಿಯ ಸಹೋದರಿಯ ಜಿಂದಗಿ ಮದುವೆ–ಸಂಸಾರಕ್ಕಷ್ಟೇ ಸೀಮಿತ ಆಗಕೂಡದು, ಜಾಣೆಯಾದ ಆಕೆ ಸ್ವಂತ ವ್ಯಕ್ತಿತ್ವ ರೂಪಿಸಿಕೊಂಡು ಬೆಳಿಬೇಕು ಎಂಬ ಕಳಕಳಿಯಿತ್ತು. ಹೀಗಾಗಿ ಸಹೋದರಿಯನ್ನು ಜೊತೆಗೊಯ್ಯುವುದಕ್ಕೆ ಅವನ ಊಟದ ಸಮಸ್ಯೆ ಒಂದು ನೆಪ ಮಾತ್ರವಾಗಿತ್ತು. ಕಾರವಾರದ ಕಾಲೇಜು ನಮ್ಮೂರ ಕಾಲೇಜಿಗಿಂತ ಭೇಷ್ ಐತಿ ಎಂದು ಬೇರೆ ವಿರುಪಾಕ್ಷಿ, ತುಸು ಜಾಸ್ತೀನೆ ವರ್ಣಿಸಿ ಹೇಳಿದ್ದ. ಸುಮಿಯೂ ಕಾರವಾರಕ್ಕೆ ಹೊರಡಲು ಹೂಂ ಅಂದುಬಿಟ್ಟಿದ್ದಳು. ಆಕೆ ಮನಸ್ಸಲ್ಲೂ ಕಡಲು ನೋಡುವ ಆಸೆಯ ಅಲೆಗಳು ಗೆಜ್ಜೆಕಟ್ಟಿ ಕುಣಿತಿದ್ದವಲ್ಲ!

ಟೆಂಥಲ್ಲಿ ಧರ್ಮಸ್ಥಳಕ್ಕೆ ಮೂರು ದಿನದ ಸ್ಕೂಲ್ ಟ್ರಿಪ್ ಹೋದಾಗ ಮುರ್ಡೇಶ್ವರದಲ್ಲಿ ಪ್ರಥಮ ಬಾರಿಗೆ ಸಮುದ್ರ ತೀರದಲ್ಲಿ ನಡೆದಾಡಿದ್ದಳು. ಭವ್ಯ ಶಿವನ ವಿಗ್ರಹ, ಆತನ ಧ್ಯಾನಸ್ಥ ಭಂಗಿ, ಸುತ್ತಲೂ ಭೋರ್ಗರೆವ ಸಮುದ್ರ ಅವಳನ್ನು ಮಂತ್ರಮುಗ್ಧಳನ್ನಾಗಿಸಿತ್ತು. ಪ್ರಾರಂಭದಲ್ಲಿ ಭಯವಾದರೂ ಬೀಚ್ ಮೇಲೆ ನಿಂತಾಗ ಸಮುದ್ರದ ಅಗಾಧತೆಯಲ್ಲಿ ಅದೇನೋ ಆಕರ್ಷಣೆಯಿದೆ ಎನಿಸಿತ್ತು. ಸಮುದ್ರ ತೆರೆಗಳ ರೂಪದಲ್ಲಿ ದಡಕ್ಕೆ ಬಂದು, ತೀರದಲ್ಲಿ ಏನನ್ನೋ ಅಭಿವ್ಯಕ್ತಗೊಳಿಸಲು ಯತ್ನಿಸುತ್ತಿರುವನು ಅನಿಸುತ್ತಿತ್ತು. ಅಪ್ಪಳಿಸುವ ಮಹಾ ತೆರೆಗಳು, ಬಳುಕುವ ಅಲೆಗಳು, ನೊರೆಯುಕ್ಕಿಸುವ ಕಿರುತೆರೆಗಳು, ಉಸುಕಿನಲ್ಲಿ ವಯ್ಯಾರಗೈವ ನೊರೆತೆರೆಗಳು– ಅವಳ ಹೃದಯದೊಳಗಿಳಿದಿದ್ದವು. ಸೂರ್ಯಾಸ್ತದ ಭವ್ಯ ದೃಶ್ಯವಂತೂ ಅವಳನ್ನು ಪರವಶಗೊಳಿಸಿಬಿಟ್ಟಿತ್ತು... ಸಾಗರದ ಆ ನೆನಪು ದಿನವೂ ಭೋರ್ಗೆರೆಯುತ್ತಿತ್ತಾದರೂ, ಕಡಲತೀರ ಕಾರವಾರವು ಹೀಗೆ ತನ್ನನ್ನು ಕರೆಸಿಕೊಳ್ಳುತ್ತದೆ ಎಂಬುದು ಮಾತ್ರ ಕನಸುಮನಸಿನಲ್ಲೂ ಇರಲಿಲ್ಲ.

ಆದರೆ ಮನೆಯವರೆಲ್ಲ ಸುಮಿಯನ್ನು ಕೇಂದ್ರದಲ್ಲಿಟ್ಟು ತಮ್ಮದೇ ಕನಸುಗಳನ್ನು ಹೆಣೆದಿದ್ದರು. ಅಜ್ಜಿಗೆ ಪಿಯುಸಿ ಮುಗಿದದ್ದೇ ಮೊಮ್ಮಗಳ ಶಾದಿ ಕಣ್ತುಂಬಿಕೊಳ್ಳುವ ಕನಸು, ನೀಲವ್ವನಿಗೆ ಕುಡಿಬಾಳೆ ಎಲೆಯಂಥ ಮಗಳನ್ನು ಕಣ್ರೆಪ್ಪೆಯೊಳಗೇ ಕಾಪಿಡುವ ಕನಸು, ಅಪ್ಪ ಲಿಂಗಣ್ಣನವರಿಗೆ ಬಿಸಿನೆಸ್ ನಿಮಿತ್ತ ಬಿಸಿಗಾಳಿಯಲ್ಲಿ ಸುತ್ತಾಡಿ ಮನೆಗೆ ಬಂದೊಡನೆ ತಂಪೆನಿಸುವ ಮಗಳು ಸದಾ ಕಣ್ಣೆದುರೇ ಇರಬೇಕೆನ್ನುವ ಕನಸು, ತಮ್ಮ–ತಂಗಿಯರಿಗೆ (ಚಿಕ್ಕಪ್ಪಂದಿರ ಮಕ್ಕಳು) ಅಕ್ಕನನ್ನು ಗೋಳು ಹೊಯ್ದುಕೊಂಡು, ಆಕೆಯ ಅಕ್ಕರೆಯನ್ನು ಸವಿಯುತ್ತಿರುವ ಕನಸು, ಆಳುಕಾಳುಗಳಿಗೆ ಮನೆಯೆದುರು ನಿಂತು 'ಧಣಿ' ಎಂದು ಕರೆದು ದಣಿವಾಗಿ 'ಸೋಮವ್ವ' ಎಂದು ಬಾಯ್ತುಂಬಾ ಕರೆಯುವ ಕನಸು... ಹೀಗಾಗಿಯೇ ಸುಮಿ ಮನೆ ಬಿಡುವಾಗ ಎಲ್ಲರಿಗೂ ಮುಂಜಾನೆಯ ಸವಿಕನಸೇ ಎದ್ದು ಹೋದಂತೆ ಅನಿಸಿದ್ದು! ಆದರೆ ಕಾಡು ಮತ್ತು ಕಡಲಿನತ್ತ ಅವ್ಯಕ್ತ ಆಕರ್ಷಣೆಯಿದ್ದ ಹುಡುಗಿ ಸುಮಿಯ ಹೃದಯದಲ್ಲಿ ಅಗಲಿಕೆಯ ನೋವಿನಲ್ಲೂ ಸಮುದ್ರ ಸಂಭ್ರಮವೇ ಇತ್ತು. ಲಿಂಗಣ್ಣ ನಮ್ಮದೇ ಕಾರು ಒಯ್ಯೋ ಅಂದಿದ್ದರು. ವಿರುಪಾಕ್ಷಿ, 'ಇಲ್ಲಾ ಆಕಿಗೆ ಬಸ್ ಮ್ಯಾಲ್ ಹೋದ್ರನ ಊರುಜನ ಎಲ್ಲಾ ಸರಿ ಗೊತ್ತಾಕೈತಿ' ಎಂದಿದ್ದ.

ಕಲಬುರಗಿಯನ್ನು ಬಿಟ್ಟ ಬಸ್ಸು ಜೇವರ್ಗಿ, ಬಾದಾಮಿಯಂಥ ಪರಿಚಿತ ಊರುಗಳನ್ನು ದಾಟಿ ಮುಂದೆ ಅಪರಿಚಿತ ಪ್ರದೇಶಗಳಲ್ಲಿ ಕ್ರಮಿಸುತ್ತಿರುವಂತೆಯೇ ಸುಮಿಯ ಎದೆಯಲ್ಲಿ ಹೊಸ ಗಾಳಿಬೆಳಕಿನ ಕುತೂಹಲವೂ ಸಣ್ಣ ತಳಮಳವೂ ಹಾವು ಏಣಿಯಾಟ ಆಡುತ್ತಿದ್ದವು. ಕಡಲಿನತ್ತ ಪ್ರಯಾಣ ಸಾಗುತ್ತಿರುವ ಸುಖಭಾವ ಅವಳಲ್ಲಿದ್ದರೂ, ಎಲ್ಲರ ಸಾನಿಧ್ಯದಲ್ಲಿ ಸಿಗುವ ಪ್ರೀತಿಯಿಂದ ವಂಚಿತಳಾಗುವ ನೋವು ದಾರಿಯುದ್ದಕ್ಕೂ ಅವಳನ್ನು ಹೆಚ್ಚುಕಮ್ಮಿ ಮೌನವಾಗಿಟ್ಟಿತ್ತು. ಮಧ್ಯಾಹ್ನದ ಹೊತ್ತಿಗೆ ಬಸ್ಸು ಹುಬ್ಬಳ್ಳಿ ತಲುಪಿದಾಗ ಊಟ ಮಾಡಿ ಅಲ್ಲಿಂದ ಪ್ರಯಾಣ ಮುಂದುವರಿಸಿದರು. ಕಲಘಟಗಿ ಕಿರವತ್ತಿ ದಾಟುತ್ತಿದ್ದಂತೆಯೇ ಸುಮಿಯನ್ನು ಕಾಡು ಸ್ವಾಗತಿಸಿತು. ಬಿಸಿಲು ಕಡಿಮೆಯಾಗಿ ತಂಪುಗಾಳಿ ಬೀಸುತ್ತಿತ್ತು. ಯಲ್ಲಾಪುರದ ನಂತರ ಅರಬೈಲು ಘಟ್ಟ ಇಳಿವಾಗ, ಹೆಮ್ಮರಗಳ ದಟ್ಟಕಾಡು ಭಯಮಿಶ್ರಿತ ರೋಮಾಂಚನವನ್ನು ಉಂಟುಮಾಡಿತು. ಕಾಡು ಕೂಡ ಕಡಲಿನಂತೆ ನಿಗೂಢವಾಗಿದೆ ಅನಿಸಿತು ಸುಮಿಗೆ. ಇಂಥ ನಿಗೂಢತೆಯತ್ತ ತನ್ನನ್ನು ಸೆಳೆಯುವ ಶಕ್ತಿ ಯಾವುದು ಎಂದು ಯೋಚಿಸಿದಳು. ನಿದ್ದೆಯಲ್ಲಿದ್ದ ವಿರುಪಾಕ್ಷಿ ಅರಬೈಲ್ ಘಟ್ಟದ ತಿರುವು ಮುರುವು ದಾರಿಯಲ್ಲಿ ಬಸ್ಸು ಕುಲುಕಾಡುವ ರೀತಿ ಮತ್ತು ಗತಿಯಲ್ಲಿ ಎಡಕ್ಕೂ ಬಲಕ್ಕೂ ತೂಕಡಿಸುತ್ತಿದ್ದ. ಘಟ್ಟ ಇಳಿದ ಮೇಲೆ ಬಸ್ಸು ವೇಗ ಹೆಚ್ಚಿಸಿಕೊಂಡು ಗುಳ್ಳಾಪುರ, ರಾಮನಗುಳಿ, ಸುಂಕಸಾಳ, ಅಗಸೂರು ಮುಂತಾದ ಹೊಸಹೊಸ ಊರುಗಳನ್ನು ಹಾದುಹೋಗುತ್ತಿತ್ತು. ಬಾಳೆಗುಳಿಯಲ್ಲಿ ರಸ್ತೆಯು ರಾಷ್ಟ್ರೀಯ ಹೆದ್ದಾರಿಗೆ ಕೂಡಿಕೊಂಡಿತು.

ಅಂಕೋಲೆಯೊಳಗೆ ಹೋಗಿಬಂದು ಕಾರವಾರ ತಲುಪಿದಾಗ ಕತ್ತಲಾಗಿತ್ತು. ಉಪ್ಪಿನಗಾಳಿ ಬಸ್ಸೊಳಗೆ ನುಗ್ಗಿದಾಗ ಸುಮಿ ಸಮುದ್ರ ಸನಿಹದಲ್ಲೇ ಇರುವುದನ್ನು ಗ್ರಹಿಸಿದ್ದಳು. ಕಿಟಕಿಯಾಚೆ ಇಣುಕಿ ಇಣುಕಿ ಸಮುದ್ರ ಕಣ್ಣಿಗೆ ಬೀಳುವುದನ್ನು ಕಾದಿರುವಾಗ ವಿರುಪಾಕ್ಷಿ 'ಅಯ್ಯೋ, ಹಂಗ್ಯಾಕೆ ಬೇಚೈನ್ ಆಗ್ತಿ? ನಾಳೆಯಿಂದ ನಿನ್ನ ಜಿಂದಗೀನೇ ಸಮುದ್ರ ತಾಬೆ ಮಾಡ್ತೀನಿ, ತಗಳವ್ವ...' ಎಂದನು.

***

ಮರುದಿನ ಸಂಜೆ ಹೊತ್ತಿಗೆ ಸುಮಿ ಬೀಚಿಗೆ ಬಂದಿದ್ದಳು. ಕಾರವಾರದ ಕಡಲ ತೀರದೊಂದಿಗೆ ಅದು ಅವಳ ಮೊದಲ ಮುಲಾಕಾತು! ಹೆದ್ದಾರಿ ಪಕ್ಕದಲ್ಲಿ ಉದ್ದಕ್ಕೂ ಚಾಚಿಕೊಂಡಿರುವ ಸ್ವಚ್ಛ ಸುಂದರ ಬೀಚು. ಕಣ್ಮುಟ್ಟುವವರೆಗೂ ನೀಲಿ ಸಾಗರ. ಹಿಂಬದಿಗೆ ಪುಟ್ಟ ನಗರವನ್ನು ಬಗಲಲ್ಲಿ ಇರಿಸಿಕೊಂಡಂತೆ ಕಾಣುವ ಸಹ್ಯಾದ್ರಿ ಪರ್ವತಗಳು. ಎಡಕ್ಕೆ ಅಂಥ ಗಿರಿಸಾಲುಗಳೆರಡು ಸಂಧಿಸುವಲ್ಲಿ ನಿರುಮ್ಮಳವಾಗಿರುವ ಚಿಕ್ಕ ಬಂದರು. ಬಂದರೊಳಗೆ ಮೂಗುತೂರಿಸಿ ನಿಂತಂತಿರುವ ಒಂದೆರಡು ಹಡಗುಗಳು. ಎದುರು ಸಮುದ್ರದಲ್ಲಿ ಸಣ್ಣಪುಟ್ಟ ದ್ವೀಪಗಳು. ದೂರದಲ್ಲಿ ಲಂಗರು ಹಾಕಿ ತೇಲುತ್ತಿರುವ ಜಹಜುಗಳು. ಬಲಬದಿಯಲ್ಲಿ ದೇವಲೋಕದಿಂದ ಹಗುರ ಇಳಿಸಿ ಹೋದಂತೆ ಕಾಣುವ ದೇವಭಾಗ... ಆಹಾ! ಆ ಅದ್ಭುತ ಸೌಂದರ್ಯವನ್ನು ಬಿಡಿಯಾಗಿಯೂ ಇಡಿಯಾಗಿಯೂ ಕಣ್ತುಂಬಿಕೊಳ್ಳುತ್ತಿದ್ದ ಸುಮಿಗೆ ತಾನೊಂದು ಭವ್ಯ ಕನಸಿನೊಳಗಿರುವಂತೆ ಅನಿಸುತ್ತಿತ್ತು.

'ಇದೇ ಟಾಗೋರ್ ಬೀಚು' ಅಂದ ವಿರುಪಾಕ್ಷಿ. 'ರವೀಂದ್ರನಾಥ್ ಟಾಗೋರು ಇಲ್ಲಿಗ ಬಂದಿದ್ರಂತ. ಈ ಬೀಚಿನ ಸೌಂದರ್ಯದ ಬಗ್ಗೆ ಚಂದದ ಸಾಲು ಬರದಾರಂತ. ಅದ್ಕ ಅವ್ರ ಹೆಸ್ರು ಇಟ್ಟಾರ' ಅಂದ. ಬೀಚುಗಳಿಗೆ ಹೀಗೆ ಹೆಸರುಗಳಿರುವುದು ಸುಮಿಗೆ ಅಜೀಬ್ ಅನಿಸಿತು. ಪಾದಗಳು ಸರಿದಾಡುವ ಉಸುಕಿನಲ್ಲಿ ನಡೆದಾಡಿದಳು. ಬಿಳಿನೊರೆಯುಕ್ಕಿಸುತ್ತ ಹತ್ತಿರವಾಗುವ ಕಿರುತೆರೆಗಳಿಂದ ತಪ್ಪಿಸಿಕೊಳ್ಳುವ ಆಟ ಆಡಿದಳು. ಅಲೆಗಳು ಕಾಲ್ಬೆರಳುಗಳನ್ನು